ಶ್ರೀ ಟಿ. ತಾರೇಗೌಡ.—ಅಭಾವ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುತ್ತೇವೆಂದು ಹೇಳಿದಿರಿ, ಎರಡು ಮೂರು ವರ್ಷಗಳಿಂದ ಎಸ್ಟಿಮೇಟು ಸಿದ್ಧವಾಗಿ ಹಣ ಕೊಟ್ಟರೂ ಎರ್. ಆರ್. ಗ್ರ್ಯಾಂಟ್ ಅಡ್ಜಸ್ಟ್ ಮಾಡಿ ಬ್ಯಾರನ್ಸ್ ಅಮೌಂಟ್ ಕೊಡುವುದಕ್ಕೆ ದೊಡ್ಡ ಮನಸ್ಸು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ದೊಡ್ಡ ಮನಸ್ಸಿನ ಪ್ರಶ್ನೆಯಲ್ಲ. ಎರ್.ಆರ್. ಎಷ್ಟು ಕೊಡಬೇಕೋ ಅಷ್ಟನ್ನು ಕೊಟ್ಟಿದ್ದೇವೆ. ಪಂಚಾಯಿತಿಯವರು ಕೊಡಬೇಕಾದ ಹಣವನ್ನು ಕೊಡಲಿಲ್ಲ. ಪಂಚಾಯಿತಿಯಲ್ಲಿ ಟ್ಯಾಕ್ಸ್, ವಗೈರೆ ಅನ್ನು ಸರಿಯಾಗಿ ವಸೂಲು ಮಾಡುತ್ತಾ ಇಲ್ಲ. ಸ್ಟೇಟ್‌ನಲ್ಲಿ ಸುಮಾರು ಐದುಕೋಟಿ ರೂಪಾಯಿ ಪಂಚಾಯಿತಿಯಿಂದ ವಸೂರಾಗದೆ ನಿಂತಿದೆ. ಇವರು ಪಂಚಾಯಿತಿ ಹಣವನ್ನು ಬೇಗ ಕೊಟ್ಟರೆ ಎರ್. ಆರ್. ಗ್ರ್ಯಾಂಟ್ ಅನ್ನು ಏನು ಕೊಡಬೇಕೋ ಅದನ್ನ ಕೊಡುತ್ತೇವೆ.

ಶ್ರೀ ಟಿ. ತಾರೇಗೌಡ.—ತಿಮ್ಮನಹಳ್ಳಿ ಪಂಚಾಯಿತಿಯವರು 12ನೇ ತಾರೀಖು ಮೂರು ಸಾವಿರ ರೂಪಾಯಿಗಳನ್ನು ಸರ್ಕಾರಕ್ಕೆ ಕಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಇತ್ತೀಚೆಗೆ ಕಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ. ಕಟ್ಟಿದ್ದರೆ ಅಲ್ಲಿಯ ಕೆಲಸ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಯಂಕಟಪ್ಪ.—ಪಂಚಾಯಿತಿಯವರು ಕೊಡಬೇಕಾದ ವಂತಿಗೆ ಐದು ಕೋಟಿ ರೂಪಾಯಿಗಳು ಇನ್ನೂ ವಸೂಲಿಯಾಗಬೇಕು ಎಂದು ಹೇಳಿದಿರಿ, ಸರ್ಕಾರದವರು ನೇಮಕ ಮಾಡಿರತಕ್ಕ ಏಲೇಜ್ ಆಕೌಂಟೆಂಟುಗಳು, ಪಂಚಾಯಿತಿ ಕಾರ್ಯದ ಬಗ್ಗೆ ಹೆಚ್ಚು ಗಮನ ಪಹಿಸುತ್ತಿಲ್ಲ, ಅವರು ವಸೂಲಿಯ ಬಗ್ಗೆ ಏನು ಕ್ರಮ ತೆಗೆದುಗೊಂಡಿಲ್ಲ, ಇದಕ್ಕೆ ಪಂಚಾಯಿತಿಯವರು ಕಾರಣರೋ ಅಥವಾ ವಿಲೇಜ್ ಅಕೌಂಟೆಂಟ್‌ರುಗಳು ಕಾರಣರೋ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎನ್. ಬಸವಯ್ಯ.—ತಿಮ್ಮನಹಳ್ಳಿ, ಚಿಕ್ಕನಾಯಕನಹಳ್ಳಿ ಪಂಚಾಯಿತಿಯವರಿಂದ 10 ಪರ್ಸೆಂಟ್ ಹಣವನ್ನು ಕೊಡುವುದಕ್ಕಾಗುವುದಿಲ್ಲ. ಗ್ರಾಮದ ಇತರೆ ಕೆಲಸಗಳಿಗೋಸ್ಕರ ಹಣವನ್ನು ಉಪಯೋಗಿಸಬೇಕು, ಪಂಚಾಯಿತಿಯವರು ಐದು ಪರ್ಸೆಂಟ್ ಹಣವನ್ನು ಕೊಡುತ್ತಾರೆ ಇನ್ನು ಐದು ಪರ್ಸೆಂಟ್ ಅನ್ನು ಎರ್. ಆರ್. ಗ್ರ್ಯಾಂಟಿನ ಮೂಲಿಕ ಕೊಡಿಸಿ ಕೊಡಿ ಎಂದು ಕೇಳುತ್ತೇನೆ. ಅದಷ್ಟು ಬೇಗ, ಇದು ದೊಡ್ಡ ಗ್ರಾಮವಾಗಿರುವುದರಿಂದ ನೀರನ್ನು ಒದಗಿಸಿ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ತಾರೇಗೌಡ.—ಕಳ್ಳಂಬೆಳ್ಳದಲ್ಲಿ ಕುಡಿಯುವ ನೀರು ಇಲ್ಲದೆ ಕೆರೆಯ ನೀರನ್ನು ಕುಡಿಯುತ್ತಿದ್ದಾರೆ. ಹಾಗಲವಾಡಿಯಲ್ಲಿಯೂ ನೀರು ಇಲ್ಲದೆ ಇರುವುದರಿಂದ ತೊಂದರೆಯಾಗಿ ಜನ ಕಷ್ಟದಲ್ಲಿದ್ದಾರೆ. ಆ ಜನಕ್ಕೆ ಮುಖ್ಯವಾಗಿ ಕುಡಿಯುವ ನೀರಿನ ಅವಶ್ಯಕವಿರುವುದರಿಂದ ಸರ್ಕಾರದವರು ರಿಯಾಯಿತಿ ತೋರಿಸಿ ಅವರಿಗೆ ಗ್ರ್ಯಾಂಟ್‌ನ್ನು ಮಂಜೂರು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ರಿಗ್ ವೆರ್ಸ್, ಬೋರ್‌ವೆರ್ಸ್‌ಹಾಕಿ ಕೊಡೋಣ. ವಾಟರ್ ಸಪ್ಲೈ ಸ್ಕೀಂ ಅನ್ನು ಮಂಜೂರು ಮಾಡುವುದಕ್ಕೆ ಬರುವುದಿಲ್ಲ. ಇದಕ್ಕೆ ಅವರು 10 ಪರ್ಸೆಂಟ್ ಕಂಟ್ರಿಬ್ಯೂಷನ್ ಅನ್ನು ಕೊಡಬೇಕಾಗುತ್ತದೆ.

Irrigation Tank near Ichalayallapur Village

264. Sri M. M. NADAF (Shiggoan).—

Will the Minister for Public Works and Electricity be pleased to state.—

(a) whether it has come to the notice that an Irrigation tank is being built near Ichalayallapur village of Savanur Taluk ;

(SRI M. M. NADAF)

(*b*) whether it has come to their notice that the work has not been completed even though its work was started 6 to 7 years ago ;

(*c*) the extent of land to be irrigated under this tank and the estimated cost of construction of the same ;

(*d*) the amount spent by Government so far in this behalf ;

(*e*) the action the Government will take to complete this work speedily ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) Yes.

(*c*) It is estimated that 262 acres of land will be irrigated under this tank. Estimate cost : Rs. 2,51,000.

(*d*) Rs. 89,905.

(*e*) As the present contractor has not started the work, efforts will be made to complete the work as early as possible by entrusting the same to another contractor.

ಸ್ವಾಮಿ, 'ಬ' ಪ್ರಶ್ನೆಗೆ 'ಎಸ್' ಎಂದು ಕೊಟ್ಟಿದ್ದಾರೆ ಅದನ್ನು ದಯವಿಟ್ಟು 'No' ಎಂದು ಬರೆದುಕೊಳ್ಳಬೇಕು.

ಶ್ರೀ ಎಂ. ಎಂ. ನದಾಫ್.—ಈ ಕೆರೆಯನ್ನು ಪ್ರಾರಂಭಿಸಿ 6-7 ವರ್ಷವಾದರೂ 300 ಎಕರೆ ಜಮೀನಿಗೆ ನೀರಾವರಿಯಾಗುವಾಗ, ಈ ಕೆರೆಯ ಕೆಲಸವನ್ನು ಪೂರೈಸುವುದಕ್ಕಾಗಲಿಲ್ಲ. ಇದಕ್ಕೆ ಏನು ಕಾರಣ ತಿಳಿಸುತ್ತೀರಾ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—6-7 ವರ್ಷವಾಗಿರುವುದು ಎಂದು ಹೇಳುವುದು ತಪ್ಪು, ಕೆರೆಯ ಕೆಲಸವನ್ನು ಪ್ರಾರಂಭಿಸಿ ನಾಲ್ಕೂವರೆ ವರ್ಷವಾಗಿದೆ. ಮತ್ತೆ ಕೆರೆಯ ಕೆಲಸ ನಿಧಾನವಾಗಿರುವುದಕ್ಕೆ 2-3 ಕಾರಣಗಳು ಇವೆ. 1968ನೇ ಇಸವಿಯ ಕೊನೆಯ ಭಾಗದಲ್ಲಿ ಟೆಂಡರ್ ಕಾರ್‌ಫಾರ್ ಮಾಡಿ ಎರಡು ಪರ್ಸೆಂಟ್ ಎಕ್ಸೆಸ್ ಬಂದು ಕ್ಯಾನ್ಸಲ್ ಮಾಡಿದ್ದೇವೆ. ತಿರುಗಿ ಟೆಂಡರ್ ಕಾರ್‌ಫಾರ್ ಮಾಡಿ, ಅದನ್ನೂ ಕ್ಯಾನ್ಸಲ್ ಮಾಡಿದೆವು. 7-8-1969ರಲ್ಲಿ ಡಿಪಾರ್ಟ್‌ಮೆಂಟ್ ಮೂಲಕ ಕೆಲಸ ಪ್ರಾರಂಭವಾಗಿ 89,905 ರೂಪಾಯಿ ಖರ್ಚಾಗಿದೆ. ಆದಾದ ಮೇಲೆ ಚೀಫ್ ಇಂಜನಿಯರ್ ಟೆಂಡರ್ ಕಾರ್‌ಫಾರ್ ಮಾಡಿ, ಕೆಲಸ ಮಾಡಲಿಕ್ಕೆ ಹುಕುಂ ಮಾಡಿದರು. 22-3-1970ರಲ್ಲಿ ಮತ್ತೆ ಟೆಂಡರ್ ಕಾರ್‌ಫಾರ್ ಮಾಡಿ, ಕಂಟ್ರಾಕ್ಟ್ ಕೊಟ್ಟರು ಮೂರು ವರ್ಷದಿಂದ ಕೆಲಸ ಮಾಡಿಲ್ಲ. ಕೆಲಸ ಮುಂದುವರೆದಿಲ್ಲ. ಇದರ ಬಗ್ಗೆ ಸರ್ಕಾರ ತೀವ್ರಗತಿಯಿಂದ ಪ್ರಯತ್ನ ಮಾಡುತ್ತಾ ಇದೆ. There is some lapse somewhere. ಮೂರು ವರ್ಷಗಳಿಂದ ಕೆಲಸ ನಿಲ್ಲಲಿಕ್ಕೆ ಏನು ಕಾರಣ ಎಂದು ವಿಚಾರಣೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ಮಾಡಿ ಕೆಲಸವನ್ನು ಮುಂದುವರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಎಂ. ನದಾಫ್.—ತಾವು ಡಿಪಾರ್ಟ್‌ಮೆಂಟಿನ ಮುಖಾಂತರ ವರ್ಕ್ಸ್ ತೆಗೆದು ಕೊಂಡಿದ್ದೇವೆ ಎಂದು ಹೇಳಿದಿರಿ, ಅನಂತರ ಇದನ್ನು ಮೊದಲನೆಯ ಕಂಟ್ರಾಕ್ಟರಿಗೆ ಕೊಟ್ಟದ್ದು ತಪ್ಪು ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದನ್ನೆ ಹೇಳಿದೆ, ಇದರಲ್ಲಿ ಏನೋ ಅವಾತುರ್ಯ ನಡೆದಿದೆ. ವಿಚಾರಣೆ ನಡೆಸಿ ನಿಮ್ಮ ಕೆಲಸ ಮುಂದುವರಿಸುತ್ತೇನೆ ಎಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಬಿ. ಜಿ. ಬಣಕಾರ.—ಈಗ ಮಾಡುತ್ತಾ ಇರುವ ಪ್ರಕಾರ, ಅವನಿಂದ ಕೆಲಸವನ್ನು ಮಾಡಿಸುವುದಕ್ಕಾಗುವುದಿಲ್ಲ. ಅವನ ಅಪ್ಪನಿಂದಲೂ ಕೆಲಸ ಮಾಡುವುದಕ್ಕಾಗುವುದಿಲ್ಲ, ಇಂಥವರು ಬೇಕಾದಷ್ಟು ಜನ ಇದ್ದಾರೆ. ಅವರ ಮೇಲೆ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ಇಂಥ ಕಂಟ್ರಾಕ್ಟರುಗಳನ್ನು ರದ್ದುಪಡಿಸಿ, ಅಧಿಕಾರಿಗಳು ಒಂದು ವೇಳೆ ನಿರ್ದಾಕ್ಷಿಣ್ಯವಾಗಿ ಇವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ, ಇದನ್ನೆರ್ಲಾ ನೋಡಿಕೊಂಡು ಡಿಪಾರ್ಟ್‌ಮೆಂಟಿನವರಾಗಲಿ ತೀವ್ರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಧಾರವಾಡ ಜಿಲ್ಲೆಯಲ್ಲಿ, ಅದರಲ್ಲೂ ಕೂಡ ಈ ಭಾಗದಲ್ಲಿ ಬ್ಲಾಕ್ ಕಂಟ್ರಾಕ್ಟರ್ಸ್ ಇದ್ದಾರೆ ಎಂದು ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ಕೆಲಸವನ್ನು ಬ್ಲಾಕ್ ಲಿಸ್ಟ್ ಮಾಡಿದ್ದೇನೆ. ಮುಂದೆ ನೋಡಿ ಬರತಕ್ಕ ಬ್ಲಾಕ್ ಕಂಟ್ರಾಕ್ಟರ್ಸ್ ಅನ್ನು ಬ್ಲಾಕ್ ಲಿಸ್ಟ್ ಮಾಡುತ್ತೇನೆ.

ಶ್ರೀ ಎಂ. ಎಂ. ನದಾಫ್.—ಈಗ ಕಂಟ್ರಾಕ್ಟ್ ಕೊಟ್ಟಿರುವದು ಮೊದಲನೆಯ ಕಂಟ್ರಾಕ್ಟರ್ ಮಗನಿಗೆ ಎಂದು ತಮಗೆ ತಿಳಿದು ಬಂದಿದೆಯೇ ?

ಶ್ರಿ ಎಚ್. ಎಂ. ಚೆನ್ನಬಸಪ್ಪ.—ವಿವರಗಳನ್ನು ಹೇಳಬೇಕಾದದು ಅನಗತ್ಯ. ಏನು ಅಚಾತುರ್ಯ ನಡೆಯುತ್ತಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ತೀವ್ರವಾಗಿ ಪರಿಶೀಲಿಸಿ ವಿಚಾರಣೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ಮಾಡಿ ಕೆಲಸ ಮುಂದುವರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಇದೇ ಪ್ರಶ್ನೆಯನ್ನು ಪುನಃ ಕೇಳಿದರೆ ಏನು ಹೇಳಲು.

KELAGUR BRIDGE IN MUDIGERE TALUK

270. **Sri G. PUTTASWAMY** (Mudigere).—

Will the Minister for Public Works and Electricity be pleased to state.—

(*a*) whether it has come to the notice of the Government that Kelagur bridge on Kottigere-Kalasa road of Mudigere taluk is in dangerous condition and thereby inconvenience is caused for the movement of people and cattle ;

(*b*) if so, whether the Government have thought of constructing a new bridge by demolising the said bridge ;

(*c*) if so, whether the said work would be taken up during 1972-73 by making provision in the present year's budget ?

Sri H. M. CHANNABASAPPA (Minister for Public Works and Electricity).—

(*a*) Yes. The bridge is not in such a condition which is likely to collapse immediately and there may not be any difficulty for movement of the people.

(*b*) Under the consideration of the Government.

(*c*) No. It will be considered for including the same in 1973-74 Budget. But this is subject to availability of funds.

Sri G. PUTTASWAMY.—You have accepted the dangerous condition of the Kelgur bridge on Kottigere-Kalasa Road. Will you kindly explain the extent of damage caused to this bridge ?